## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 115/2024

**ಸಾಕ್ಷಿಯನ್ನು ದಿಃ 21.04.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಅಜಿಮುನ್ನಿಸಾ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ3 |
| ತಂದೆಯ ಹೆಸರು | ಮೊಹಮ್ಮದ್ದಿಸಾ | | |
| ವಯಸ್ಸು | 60 ವರ್ಷ | | |
| ಕೆಲಸ | ಇಲ್ಲ | | |
| ವಾಸಸ್ಥಳ | ಮುಸ್ಲಿಂ ಬ್ಲಾಕ್ ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ-1 ನನ್ನ ಅಕ್ಕನ ಮಗಳು. ಚಾಸಾ-2 ನನ್ನ ಅಕ್ಕನ ಮಗ. ಚಾಸಾ-4 ನನ್ನ ಅಣ್ಣನ ಮಗ. ಚಾಸಾ-5 ನನ್ನ ಅಕ್ಕ. ಈ ಕೇಸಿನ ಆರೋಪಿತರು ಗೊತ್ತು. ದಿಃ 01.09.2023 ರಂದು ಮಧ್ಯಾಹ್ನ ಸುಮಾರು 3-45 ಗಂಟೆಗೆ ನಾನು ಮನೆಯ ಒಳಗೆ ಇದ್ದಾಗ 1 ರಿಂದ 3ನೇ ಆರೋಪಿತರು ಬಂದು ಶೆಡ್ ಹಾಕುತ್ತಿದ್ದರು. ಕೇಸು ಕೋರ್ಟಿನಲ್ಲಿದೆ. ಯಾಕೆ ಶೆಡ್ ಹಾಕುತ್ತಿದ್ದಿರಾ ಎಂದು ನಾನು ಅವರನ್ನು ಕೇಳಿದೆ. ಆಗ ನನಗೆ 1 ರಿಂದ 3ನೇ ಆರೋಪಿತರು ಕೈಗಳಿಂದ ಹೊಡೆದರು. ಆಗ ಚಾಸಾ-2 ರವರು ಸ್ಥಳಕ್ಕೆ ಬಂದು ಆರೋಪಿತರನ್ನು ಪ್ರಶ್ನಿಸಿದರು. ಆಗ 3ನೇ ಆರೋಪಿ ಚಾಸಾ-2 ರವರ ಕೈ ಹಿಡಿದುಕೊಂಡರು. 1ನೇ ಆರೋಪಿ ಚಾಸಾ-2 ರವರಿಗೆ ಕಲ್ಲಿನಿಂದ ಕಣ್ಣಿನ ಭಾಗಕ್ಕೆ ಹೊಡೆದ ಅದರಿಂದ ಆತನಿಗೆ ರಕ್ತ ಬಂತು. ಎಲ್ಲಾ ಆರೋಪಿತರು ನಮ್ಮನ್ನು ಸುತ್ತುವರಿದರು ಹಾಗೂ ನನಗೆ ಹೊಡೆದರು. ಕೆಟ್ಟ ಮಾತುಗಳಿಂದ ಬೈದರು. ಚಾಸಾ-2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು, ಇಲ್ಲಿ ಆಗುವುದಿಲ್ಲ ಎಂದು ಹೇಳಿದ್ದರಿಂದ ಮೈಸೂರಿಗೆ ಕರೆದುಕೊಂಡು ಹೋದರು. ನಾನು ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾದೆ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ.ನಮ್ಮ ಮೇಲೆ ಹಲ್ಲೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2, 3 ಮತ್ತು 5ನೇ ಆರೋಪಿತರನ್ನು ನೋಡಿ ಗುರುತಿಸಿದ್ದು, 1, 4 ಮತ್ತು 7ನೇ ಆರೋಪಿತರು

ಗೈರು ಹಾಜರಾಗಿದ್ದು, ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯಬಗ್ಗೆ ತಕರಾರು ಇಲ್ಲ ಎಂದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

1 ಮತ್ತು 2ನೇ ಆರೋಪಿತರು ಮನೆಗೆ ಹಾಕಿದ್ದ ಶೆಡ್ಡನ್ನು ರಿಪೇರಿ ಮಾಡುತ್ತಿದ್ದಾಗ ನಾವೆಲ್ಲರೂ ಹೋಗಿ ಕೇಳಿದಾಗ ಆರೋಪಿತರೆಲ್ಲರೂ ಗುಂಪು ಕಟ್ಟಿಕೊಂಡು ಬಂದರು ಎಂದರೆ ಸರಿ. 3ನೇ ಆರೋಪಿ ಚಾಸಾ-2 ರವರನ್ನು ತಬ್ಬಿ ಹಿಡಿದುಕೊಂಡಾಗ 1ನೇ ಆರೋಪಿ ಕೈಯನ್ನು ಮುಷ್ಟಿ ಮಾಡಿಕೊಂಡು ಚಾಸಾ-2 ರವರ ಬಲಗಣ್ಣಿಗೆ ಹೊಡೆದರು ಎಂದರೆ ಸರಿ. ಆಗ 5 ಮತ್ತು 6ನೇ ಆರೋಪಿತರು ಚಾಸಾ-2 ರವರ ಮೈಕೈಗೆ ಕೈಗಳಿಂದ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. 2ನೇ ಆರೋಪಿ ಚಾಸಾ-1 ರವರ ಜುಟ್ಟು ಹಿಡಿದು ಎಳೆದಾಡಿದರು ಮತ್ತು 7ನೇ ಆರೋಪಿ ನನ್ನನ್ನು ತಬ್ಬಿಹಿಡಿದುಕೊಂಡಾಗ 4ನೇ ಆರೋಪಿ ನನಗೆ ಕೈಗಳಿಂದ ಎದೆ ಮತ್ತು ಹೊಟ್ಟೆಗೆ ಹೊಡೆದರು ಎಂದರೆ ಸರಿ. ಆಗ ಚಾಸಾ-4 ಮತ್ತು 5 ರವರು ಬಂದು ಜಗಳ ಬಿಡಿಸಿದರು ಎಂದರೆ ಸರಿ. ಆರೋಪಿತರೆಲ್ಲರೂ ಹೋಗುವಾಗ ಮತ್ತೊಮ್ಮೆ ನಮಂ ತಂಟೆ ತಕರಾರಿಗೆ ಬಂದರೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. MRH ವಕೀಲರಿಂದಃ**

ಗಲಾಟೆಯಾಯಿತು ಎನ್ನುವ ದಿನ ಮತ್ತು ಸಮಯದಲ್ಲಿ ಆ ಜಾಗದಲ್ಲಿ ಒಟ್ಟು 7 ಜನ ಇದ್ದರು. ಅವರ ಹೆಸರು ರೇಷ್ಮಾ ಬಾನು, ತನ್ಸಿಮ್ ಅಹಮ್ಮದ್, ಮಜಾಜ್, ರಿಯಾಜ್ ಸರ್ದಾರ್, ಸೀಮಾ ಮತ್ತು ಸಲೀಕಾ ಫಾತಿಮ. ಅವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಗಲಾಟೆಯಾಯಿತು ಎನ್ನುವ ನಿಖರವಾದ ಸ್ಥಳ ಯಾವುದು ಎಂದರೆ ನಮ್ಮ ಜಾಗ ಆಗಿತ್ತು. ಏನು ಜಾಗ ಎಂದರೆ ಮನೆ ಮತ್ತು ಜಾಗ. ಆ ಜಾಗದ ಚಕ್ಕುಬಂದಿ ಹೇಳಲಾಗುತ್ತದೆಯೇ ಎಂದರೆ ಇಲ್ಲ. ನಮ್ಮ ಮನೆಯಿಂದ ಘಟನೆಯಾಯಿತು ಎನ್ನುವ ಜಾಗ ಸುಮಾರು ಅರ್ಧ ಕಿ.ಮೀ ದೂರ ಇದೆ. 2ನೇ ಆರೋಪಿಯ ಮನೆಯಿಂದ

ಘಟನೆಯಾಯಿತು ಎನ್ನುವ ಸ್ಥಳದಿಂದ ಎಷ್ಟು ದೂರದಲ್ಲಿದೆ ಎಂದರೆ ಪಕ್ಕದಲ್ಲಿಯೇ ಇದೆ. ಸುಮಾರು 5 ರಿಂದ 6 ಅಡಿ ದೂರ ಇದೆ.

ದಿಃ 01.09.2023 ರಂದು ಸಂಜೆ 5 ಗಂಟೆಗೆ ಆಸ್ಪತ್ರೆಗೆ ಹೋಗಿದ್ದೇನೆ. 3-45 ರಿಂದ 5 ಗಂಟೆಯವರೆಗೆ ನೀವು ಏನು ಮಾಡುತ್ತಾಇದ್ದಿರಿ ಎಂದರೆ ನಾನು ಪೋಲೀಸ್ ಠಾಣೆಗೆ ಹೋಗಿದ್ದೆ. ಪೊಲಿಸರು ಆಸ್ಪತ್ರೆಗೆ ಹೋಗುವಂತೆ ಹೇಳಿದರು, ನನಗೆ BP ಜಾಸ್ತಿಯಾಗಿತ್ತು ಆದ್ದರಿಂದ ಆಸ್ಪತ್ರೆಗೆ ಹೋದೆ. ವೈಧ್ಯರು ನನಗೆ ಚೆನ್ನಾಗಿ ಚಿಕಿತ್ಸೆ ನೀಡಿದ್ದಾರೆ. ಆಸ್ಪತ್ರೆಯಲ್ಲಿ ವೈಧ್ಯರ ಬಳಿ ಎಷ್ಟು ಗಂಟೆಗೆ ಘಟನೆ ನಡೆದು ನನಗೆ ಪೆಟ್ಟಾಯಿತು ಎಂದು ಹೇಳಿದ್ದೇನೆ. ವೈಧ್ಯರ ಬಳಿ ಘಟನೆ ಎಷ್ಟು ಗಂಟೆಗೆ ಆಗಿದೆ ಎಂದು ಹೇಳಿದ್ದಿರಿ ಎಂದರೆ 4 ರಿಂದ 4-30 ಗಂಟೆ ಎಂದು ಹೇಳಿದ್ದೇನೆ. ಗಲಾಟೆಯ ಸಮಯದಲ್ಲಿ 7 ಜನ ಇದ್ದರು ಎಂದು ವೈಧ್ಯರ ಬಳಿ ಹೇಳಿದ್ದೇನೆ. ಯಾರ್ಯಾರು ಯಾವುದರಿಂದ ಹೊಡೆದರು ಎಂದು ಹೆಸರುಗಳನ್ನು ಹೇಳಿದ್ದೇನೆ. ವೈಧ್ಯರ ಬಳಿ ನಿಖರವಾದ ಸ್ಥಳವನ್ನು ಹೇಳಿದ್ದೇನೆ. ವೈಧ್ಯರ ಬಳಿ 4-30 ಗಂಟೆಗೆ ಗಲಾಟೆ ನಡೆಯಿತು ಎಂದು ಯಾಕೆ ಹೇಳಿದ್ದಿರಿ ಎಂದರೆ ಹೆಚ್ಚು, ಕಡಿಮೆ ಆಗಿರಬಹುದು. ವೈಧ್ಯರ ಬಳಿ ನನಗೆ ಎಲ್ಲಿಗೆ ಏಟಾಗಿದೆ ಎಂದು ಹೇಳಿದ್ದೇನೆ. ನನ್ನ ಹೊಟ್ಟೆಗೆ ಪೆಟ್ಟಾಗಿದೆ ಎಂದುಹೇಳಿದ್ದೇನೆ. ಔಷಧಿ ಕೊಟ್ಟು ಮನೆಗೆ ಕಳುಹಿಸಿಕೊಟ್ಟಿದ್ದಾರೆಯೇ ಎಂದರೆ ಇಲ್ಲ ಒಳರೋಗಿಯಾಗಿ ದಾಖಲಾದೆ. ನನಗೆ BPಜಾಸ್ತಿಯಾಗಿ ಓಡಾಡಬಾರದುಎಂದು ಆಸ್ಪತ್ರೆಯಲ್ಲಿಯೇ ಉಳಿಸಿದರು. ಆಸ್ಪತ್ರೆಯಲ್ಲಿದ್ದಾಗ ಮಾತ್ರೆ ತೆಗೆದುಕೊಂಡು ಊಟ, ತಿಂಡಿ ಮಾಡುತ್ತಿದ್ದೆ. ನನಗೆ ಯಾರು ಹೊಡೆದಿಲ್ಲ ಮತ್ತು ಯಾವುದೇ ಏಟಾಗಿಲ್ಲ, BP ಜಾಸ್ತಿಯಾಗಿದ್ದರಿಂದ ಪೋಲಿಸರು ಹೇಳಿದ್ದ ಕಾರಣ ಆಸ್ಪತ್ರೆಗೆ ಹೋಗಿ ತಪ್ಪು ಸಮಯ ಹೇಳಿದ್ದೇನೆ ಎಂದರೆ ಸರಿಯಲ್ಲ. ನನಗೆ ಇರುವ BP ಕಾಯಿಲೆಯನ್ನು ದುರುಪಯೋಗಪಡಿಸಿಕೊಂಡು ಆರೋಪಿ ತರು ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. .ದಿಃ 01.09.2023 ರಂದು ಮಧ್ಯಾಹ್ನ 3.45 ಗಂಟೆಗೆ ನಾನು, ಚಾಸಾ-1, 2, 4 ರಿಂದ 7 ರವರು ಸ್ಥಳದಲ್ಲಿದ್ದೆವು ಎಂದರೆ ಸರಿ. ಆ ದಿನ ಮತ್ತು ಸಮಯದಲ್ಲಿ ನಾವೆಲ್ಲರೂ 1 ರಿಂದ 7ನೇ ಆರೋಪಿತರ ಮೇಲೆ ಗಲಾಟೆ ಮಾಡಿ ಗಾಯಪಡಿಸಿ 2ನೇ ಆರೋಪಿಯ ಮಾನಭಂಗಕ್ಕೆ ಪ್ರಯತ್ನಪಟ್ಟ ಬಗ್ಗೆ ನಮ್ಮ ವಿರುದ್ಧ ಹುಣಸೂರು ಪಟ್ಟಣ ಠಾಣೆಯಲ್ಲಿ ಸಿ.ಆರ್ ನಂ. 184/2023 ದಾಖಲಾಗಿದೆ ಎಂದರೆ ಸರಿ.

ಸದರಿ ಪ್ರಕರಣದಲ್ಲಿ ನಾನು, ಚಾಸಾ-1 ಮತ್ತು ಇತರರು ರಾಜಕೀಯ ಪ್ರಭಾವವನ್ನು ಭೀರಿ "B" ಅಂತಿಮ ವರದಿಯನ್ನು ಹಾಕಿಸಿದ್ದೇವೆ ಎಂದರೆ ಸರಿ. ನಾನು ಚಾಸಾ-1 ಮತ್ತು ಇತರರೆಲ್ಲರೂ ರಾಜಕೀಯ ಪ್ರಭಾವವನ್ನು ಭೀರಿ ಆರೋಪಿತರ ವಿರುದ್ಧ ಈ ಸುಳ್ಳು ಕೇಸನ್ನು ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಹುಣಸೂರು ಸಿವಿಲ್ ನ್ಯಾಯಾಲಯದಲ್ಲಿ 2ನೇ ಆರೋಪಿ ನಮ್ಮ ವಿರುದ್ಧ ದಾಖಲಿಸಿದ್ದ ಅಸಲು ದಾವಾ ಸಂಃ 218/2013ರಲ್ಲಿ ನಾನು ನ್ಯಾಯಾಲಯಕ್ಕೆ ಬರುತಿದ್ದೆ ಎಂದರೆ ಸರಿ. ಸದರಿ ದಾವೆ ನಮ್ಮ ವಿರುದ್ಧವಾಯಿತು ಎಂದರೆ ಸರಿ. ನಾವು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ್ದೇವೆ ಎಂದು 2ನೇ ಆರೋಪಿ ನಮ್ಮ ವಿರುದ್ಧ ಮಿಸ್ ಕೇಸ್ ದಾಖಲಿಸಿದ್ದರು ಎಂದರೆ ಸರಿ. ಅಸಲು ದಾವಾ ಸಂಃ 218/2013 ತೀರ್ಪು ಆದ ನಂತರ ಹಿಸ್ಸೆಯನ್ನು ಕೋರಿ 2ನೇ ಆರೋಪಿ ನಮ್ಮ ವಿರುದ್ಧ ಹುಣಸೂರು 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಃ 127/2023 ನ್ನು ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆ ಇನ್ನೂ ಚಾಲ್ತಿಯಲ್ಲಿದೆ. ಆ ದಾವೆಯಲ್ಲಿ ಸಮನ್ಸ್ ಬಂದ ನಂತರ ನಾವು ವಕೀಲರನ್ನು ನೇಮಕ ಮಾಡಿದ್ದೇವೆ ಎಂದರೆ ಸಮನ್ಸ್ ಬಂದಿಲ್ಲ ಆದರೆ ವಕೀಲರನ್ನು ಇಟ್ಟುಕೊಂಡಿದ್ದೇವೆ. ಅಸಲು ದಾವಾ ಸಂಃ 127/2023 ರಲ್ಲಿ ಸಮನ್ಸ್ ಜಾರಿಯಾದ ನಂತರ ಘಟನೆ ನಡೆದಿದೆ ಎಂದರೆ ಸರಿ. ಘಟನೆಗೆ ಚಾಸಾ-1, 2, 4 ರಿಂದ 7 ಕಾರಣ ಎಂದರೆ ಸರಿ. ಅವರು ಕೂಡ ಬಂದಿದ್ದರು. ದಿಃ 01.09.2023 ರಂದು ಮಧ್ಯಾಹ್ನ 3-45 ಗಂಟೆಗೆ ನಾವೆಲ್ಲರೂ 1 ಮತ್ತು 3ನೇ ಆರೋಪಿಗೆ ಹೊಡೆದಿದ್ದೇವೆ ಎಂದರೆ ಸರಿಯಲ್ಲ. ಚಾಸಾ-4 ರಿಂದ 7 ರವರು ಬಂದ, 2, 4 ರಿಂದ 7ನೇ ಆರೋಪಿತರೊಂದಿಗೆ ಗಲಾಟೆ ಮಾಡಿ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ಚಾಸಾ-2 ರವರು 2ನೇ ಆರೋಪಿಯ ಮಾನಭಂಗ ಮಾಡಲು ಪ್ರಯತ್ನಿಸಿದ್ದಾರೆ ಎಂದರೆ ನನ್ನನ್ನು ಕೇಳಬೇಡಿ. ನಾವು ಆ ರೀತಿ ಮಾಡಿದ್ದರಿಂದ ನಮ್ಮ ವಿರುದ್ಧ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಆ ಕಾರಣದಿಂದಾಗಿಯೇ 03.45ಕ್ಕೆ ಘಟನೆ ನಡೆದಿದೆ ಎಂದು ಹೇಳಬೇಕಾಗಿದ್ದನ್ನು ವೈದ್ಯರ ಮುಂದೆ 4-30 ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಉರ್ದು ಭಾಷೆಯಲ್ಲಿ ಬೈದರು. ನನ್ನ ಹೇಳಿಕೆಯಲ್ಲಿ ಆರೋಪಿತರು ನಮಗೆ ಉರ್ದುವಿನಲ್ಲಿ ಬೈದರುಎಂದು ಹೇಳಿದ್ದೇನೆ. 7 ಜನರು ಕೂಡ ಉರ್ದು ಭಾಷೆಯಲ್ಲಿಯೇ ಬೈದರು. ಕೊಲೆ ಬೆದರಿಕೆ ಹಾಕಿದ್ದಾರೆ ಎನ್ನುವುದನ್ನು ಪೋಲೀಸರ ಮುಂದೆ ಹೇಳಿಲ್ಲ

ಎಂದರೆ ಹೇಳಿದ್ದೇನೆ. ಸಂಜೆ 6 ಗಂಟೆಗೆ 7 ಜನ ಆರೋಪಿತರು ನಮ್ಮ ಮನೆಯ ಹತ್ತಿರ ಕೊಲೆ ಬೆದರಿಕೆ ಹಾಕಿದ್ದಾರೆ. ಕೊಲೆ ಬೆದರಿಕೆಯನ್ನು ಉರ್ದು ಭಾಷೆಯಲ್ಲಿ ಹಾಕಿದ್ದಾರೆ. ಆರೋಪಿತರು ನಮಗೆ ಕೆಟ್ಟ ಶಬ್ದಗಳಿಂದ ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕದೇ ಇರುವ ಕಾರಣ ಅದನ್ನು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಕೊಲೆ ಬೆದರಿಕೆ ಹಾಕಿದರು ಎಂಬುದನ್ನು ಈ ದಿನ ನ್ಯಾಯಾಲಯದಲ್ಲಿ ಹೊರತುಪಡಿಸಿ ಬೇರೆ ಎಲ್ಲಿಯೂ ಹೇಳಿಲ್ಲ ಎಂದರೆ ಹೇಳಿದ್ದೇನೆ. 1, 3, 5 ಮತ್ತು 6ನೇ ಆರೋಪಿತರು ಚಾಸಾ–2 ರವರಿಗೆ ಕೈ ಮುಷ್ಟಿಯಿಂದ ಬಲವಾಗಿ ಹೊಡೆದರು, ನಮಗೆ ಅವಾಚ್ಯ ಶಬ್ದಗಳಿಂದ ಬೈದರುಎಂದು ಈ ದಿನ ಹೊರತುಪಡಿಸಿ ಬೇರೆ ಎಲ್ಲಿಯೂ ಹೇಳಿಲ್ಲ ಎಂದರೆ ಸರಿಯಲ್ಲ. ಸಹಾಯಕ ಸರ್ಕಾರಿ ಅಬಿಯೋಜಕರು ಪಾಟೀ ಸವಾಲಿನಲ್ಲಿ ಕೇಳಿದ ವಿಷಯಗಳನ್ನು ಈ ದಿನ ಹೊರತುಪಡಿಸಿ ಬೇರೆ ಎಲ್ಲಿಯೂ ಹೇಳಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಸೀರೆ, ರವಿಕೆ ಧರಿಸಿದ್ದೆ. ನನ್ನ ರವಿಕೆ ಹರಿದಿತ್ತು. ಪೋಲಿಸರಿಗೆ ಕೊಟ್ಟಿದ್ದಿರಾ ಎಂದರೆ ತೋರಿಸಿ ವಾಪಸ್ಸು ತಂದೆ. ದಿಃ01.09.2023 ರಂದು ಮಧ್ಯಾಹ್ಣ 3–45 ಗಂಟೆಗೆ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ನನಗಾಗಲೀ, ಚಾಸಾ–1 ಮತ್ತು 2 ರವರಿಗಾಗಲೀ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಆರೋಪಿತರು ಆ ದಿನ ಯಾವುದೇ ಶೆಡ್ ನಿರ್ಮಿಸುವ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗಾಗಲೀ, ಚಾಸಾ–1 ಮತ್ತು 2 ರವರಿಗಾಗಲೀ ಯಾವುದೇ ಪೆಟ್ಟು ಆಗಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ನಮ್ಮ ಮೇಲೆ ಭಾಗ ಕೇಳಿ ಸಿವಿಲ್ ದಾವೆ ಹಾಕಿರುವ ಕಾರಣ ದ್ವೇಷ ಸಾಧಿಸಬೇಕೆಂದು ಈ ಸುಳ್ಳು ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ನಾವು ರಾಜಕೀಯ ಪ್ರಭಾವ ಬೀರಿ ನಮ್ಮ ಮೇಲೆ 2ನೇ ಆರೋಪಿ ಕೊಟ್ಟಿದ್ದ ದೂರನ್ನು ಮುಚ್ಚಿಹಾಕಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.